ಕೂತೆ. ಪಕ್ಕದಲ್ಲಿ ಕೂತವರು ಕಣ್ಣಂಚಿನಲ್ಲಿ ನಗುವುದು ಕಂಡರೂ ಗಮನಿಸದೇ ಮುಗುಮ್ಮಾಗಿ ಕೂತಿದ್ದೆ.

ಕಾರು ಮನೆ ಮುಂದೆ ಬಂದು ನಿಂತೊಡನೇ ನಾವು ನಮ್ಮ ಲಗೇಜನ್ನೆಲ್ಲ ಒಳ ತರುವ ಮೊದಲೇ ಮಾಡುತ್ತಿದ್ದ ಮೊದಲ ಕೆಲಸವೆಂದರೆ ಮನೆಯ ಬೀಗ ತೆಗೆದು ಮನೆಯನ್ನು ಸ್ವಚ್ಛಗೊಳಿಸುವುದು. ಹತ್ತಿಪ್ಪತ್ತು ದಿನಗಳ ದೂಳು, ಅಲ್ಲಿಂದಿಲ್ಲಿಗೆ ಕಟ್ಟಿದ್ದ ಜೇಡರ ಬಲೆ, ಚಾವಡಿಯ ಇಳಿಸಿದ ಮಾಡಿಗೆ ಬಿಟ್ಟ ತೋರಣ ಬಳ್ಳಿಯ ಎಲೆಗಳು ಬಿದ್ದು ರಾಶಿ ಕಸ ತುಂಬಿರುತ್ತಿತ್ತು. ಅದನ್ನು ಸ್ವಚ್ಛಗೊಳಿಸಿದ ನಂತರವೇ ನಮ್ಮ ಲಗೇಜನ್ನು ಒಳ ತರುತ್ತಿದ್ದ ನನಗೆ ಈ ಸಾರಿ ಒಳ ಕಾಲಿಡುತ್ತಿದ್ದಂತೇ ಬಾಗಿಲಿನ ದಾರಂದದ ಎರಡೂ ಬದಿಯಲ್ಲಿ ಅಲ್ಲದೇ ಚಾವಡಿಯ ಗೋಡೆಯ ತುಂಬ ಕಪ್ಪು ಉಲ್ಲನಿನ ಪುಟ್ಟ ಪುಟ್ಟ ನೂರಾರು ತುಂಡುಗಳು ಅಂಟಿಕೊಂಡಂತೆ ಕಂಡಿತು. ಅರೇ! ಇದೆಲ್ಲಿಂದ ಬಂತಪ್ಪಾ, ಗಾಳಿಯಲ್ಲಿ ಏನಾದ್ರೂ ಹಾರಿಕೊಂಡು ಬಂತೇ ಎಂದುಕೊಳ್ಳುತ್ತಾ ಸುತ್ತ ನೋಡಿದರೆ ಕೆಲವೆಡೆಗಳಲ್ಲಿ ಮುದ್ದೆ ಮುದ್ದೆ ಕಪ್ಪು ಉಲ್ಲನ್ನಿನ ತುಂಡುಗಳು. ಹತ್ತಿರ ಹೋಗಿ ನೋಡಿದರೆ; ಓಹ್, ಕಂಬಳಿ ಹುಳಗಳು! ಒಂದೆರಡಲ್ಲ, ನೂರಾರು ಕಂಬಳಿ ಹುಳಗಳು. ಸುತ್ತಲೂ ನೋಡುತ್ತಾ ಕಣ್ಣು ಮುಂದಿನ ಚಾವಡಿಯ ಇಳಿಸಿದ ಸೂರಿನೆಡೆಗೆ ಹೋದರೆ ಅಲ್ಲೂ ಉಲ್ಲನ್ನಿನ ತುಂಡುಗಳು ಅಂಟಿಕೊಂಡಿವೆ. ಓಹ್, ಇವೇನಾದರೂ ಮೈಮೇಲೆ ಅಥವಾ ತಲೆ ಮೇಲೆ ಬಿದ್ದರೆ! ಮಗಳು, ಇಲ್ಲಿ ಬಂದಾಗೆಲ್ಲ ಹೇಳುವ 'ಇದು ಜಂಗಲ್ ಲೈಫ್' ಎನ್ನುವ ಮಾತು ನೆನಪಾಗಿ ಮೈಯೆಲ್ಲ ಮುಳ್ಳೆದ್ದಿತು. ತಮ್ಮ ಉಲ್ಲನ್ನಿನ ದೇಹಕ್ಕೆ ರಕ್ಷಣೆಯಾಗಿ ಅತ್ಯಂತ ತೆಳು ಬಲೆಯಂಥದ್ದನ್ನು ಸೃಷ್ಟಿಸಿಕೊಂಡು ದೊಡ್ಡ ಬಯಲಿನಲ್ಲಿ ಪಿಕ್‌ನಿಕ್ಕಿಗೆ ಬಂದವರು ಟೆಂಟ್ ಹಾಕಿಕೊಂಡು ಬಿದ್ದುಕೊಂಡಂತೆ ನೂರಾರು ಕಂಬಳಿ ಹುಳಗಳು ತಣ್ಣಗೆ ಬಿದ್ದಿದ್ದವು. ಸರ್ರನೇ ಬಿಪಿ ಏರಿತು. ಉದ್ರಿಕ್ತಳಾದವಳು ಒಳ ಹೋಗಿ ಪೊರಕೆ ತಂದು ಸರಸರ ಝಾಡಿಸಿ ಗುಡಿಸತೊಡಗಿದೆನಷ್ಟೇ. ಅಷ್ಟರಲ್ಲಿ ಒಳಬಂದ ಪತಿ, 'ಆ ಕಂಬಳಿ ಹುಳಗಳನ್ನು ಬಿಡು ಮಾರಾಯ್ತಿ. ಅವುಗಳು ಸ್ವಲ್ಪ ದಿನಗಳಲ್ಲಿ ಚಿಟ್ಟೆಯಾಗಿ ಹಾರಿ ಹೋಗ್ತವೆ. ವಿಜ್ಞಾನದ ವಿದ್ಯಾರ್ಥಿ ನೀನು' ಎಂದರು. ಸಿಟ್ಟನ್ನು ತಡೆದುಕೊಳ್ಳುತ್ತಾ ಅವರ ಮಾತನ್ನು ಲೆಕ್ಕಿಸದೇ ಗುಡಿಸತೊಡಗಿದೆ. ಚಾವಡಿಯ ತುಂಬ ಜೇಡರ ಹುಳಗಳು, ಸೈನಿಕರ ಸಾಲಿನಂತೇ ಶಿಸ್ತಿನಲ್ಲಿ ಸಾಲಾಗಿ ಹೋಗುತ್ತಿದ್ದ ಇರುವೆಗಳ ದಂಡು, ಹೋ ದೇವಾ! ಈ ಇರುವೆಗಳು ಚಾವಡಿಯ ಮೆಟ್ಟಿಲೂ ಹತ್ತದಂತೇ ಪೌಡರನ್ನು ಗೋಡೆ ಬದಿಯಿಂದ ಮೆಟ್ಟಿಲಿನವರೆಗೂ ಹಾಕಿ ಹೋಗಿದ್ದೆನಲ್ಲವೇ ಎಂದುಕೊಳ್ಳುತ್ತಾ ಇರುವೆಗಳ ಸಾಲು ಶುರುವಾದದ್ದೆಲ್ಲಿ ಎಂದು ನೋಡಿದರೆ, ಮಳೆ ನೀರು ಸಿಡಿದು ಸ್ವಲ್ಪ ಜಾಗದಲ್ಲಿ ಪೌಡರ್ ಅಳಿದ ಜಾಗದಿಂದ ಓಬವ್ವನ ಕಿಂಡಿಯಿಂದ ಶತ್ರು ಸೈನಿಕರು ಬಂದಂತೆ ನುಸುಳಿ ಬರುತ್ತಿದ್ದವು.. ಜೊತೆಗೆ ಈ ಸಾರಿ ಈ ರಾಶಿ ಕಂಬಳಿ ಹುಳಗಳು... 'ಹಾವೊಂದು ಬಾಕಿ ಇದೆ ಇಲ್ಲಿ ಬಂದು ನೆಲೆ ನಿಲ್ಲಲು' ಗೊಣಗಾಡುತ್ತ ಕಸ ಗುಡಿಸತೊಡಗಿದೆ.

* * *

ಬೆಂಗಳೂರಿನಲ್ಲಿ ಮೂರು ದಶಕಗಳಿಂದ ಇರುವ ನಾವು ನಮ್ಮ ಕನಸಿನಂತೇ ಬೆಂಗಳೂರಿನಲ್ಲೇ ಸ್ವಂತ ಸೂರು ಮಾಡಿಕೊಂಡು ನೆಲೆಯಾಗಿ, ಬೆಂಗಳೂರಿಗೆ ಬಂದ ಕೋಟ್ಯಂತರ ಜನರಂತೆ ನಗರದವರೇ ಆಗಿ ಹೋಗಿದ್ದೇವೆ. ನಾವು ಮಾತಾಡುವ ಕನ್ನಡದ ಬನಿ, ಉಚ್ಚಾರಣೆ ನೋಡಿದವರು'ನೀವು ಕರಾವಳಿಯವರೇ' ಎಂದೇ ಕೇಳುತ್ತಿದ್ದುದು ಇತ್ತು. ಅದನ್ನು ಮಗಳ ಬಳಿ ಹೇಳಿಕೊಂಡಾಗ ಮಗಳಂತೂ 'ಓಹ್ ಗಾಡ್, ನೀವಿಬ್ರು ಕರಾವಳಿಯವ್ರು ಇರಬಹುದು ಅಮ್ಮ. ಆದ್ರೆ ನಾನು ಹಾರ್ಡ್ ಕೋರ್ ಬ್ಯಾಂಗಳೂರಿಯನ್, ನಾನು ಇಲ್ಲೇ ಹುಟ್ಟಿ ಬೆಳೆದವಳು' ಎಂದು ಹೇಳಿ ತನಗೆ ಕರಾವಳಿಯ ನಂಟನ್ನು ತಗುಲಿಸಬೇಡ ಎನ್ನುವಂತೆ ಮುಲಾಜಿಲ್ಲದೇ ಹೇಳಿದ್ದಳು. ಬೆಂಗಳೂರಿನಲ್ಲಿ ದಿನ ಕಳೆಯುವಾಗೆಲ್ಲ ಊರು, ಬಾಲ್ಯದ ನೆನಪು, ತೋಟದ ಪಕ್ಕದ ಹೊಳೆ, ಸೋಮನಾಥನ ತೇರು, ಊರಿನ ಪತ್ರೊಡೆ ಮತ್ತು ವರ್ಷಕ್ಕೊಮ್ಮೆಯೊ, ಮದ್ವೆ- ಮುಂಜಿಗಳಿಗೊ ಹೋಗಿ ಬರುವಷ್ಟಕ್ಕೆ ಮಾತ್ರವೇ ಊರು ಮನದಲ್ಲಿ ಹಸಿರಾಗಿದ್ದುದು. ಅದಕ್ಕಿಂತ ಹೆಚ್ಚೇನು ಊರು ನನ್ನಲ್ಲಿ ಉಳಿದಿರಲಿಲ್ಲವೇನೋ ಅಥವಾ ಅದರೆಡೆಗೆ ಗಮನ ನೀಡಿರಲಿಲ್ಲ. ಎಷ್ಟೋ ಸಾರಿ ಊರು ನಮಗೆಲ್ಲ ಭೂತವಷ್ಟೇನಾ, ಅದು ನಮ್ಮನ್ನೆಲ್ಲ ಪೊರೆದ ಭಾವದ ಬೀಜವಲ್ಲವೇ ಎಂದೂ ಯೋಚಿಸಿದ್ದಿದೆ. ಆದರೆ ತನ್ನಷ್ಟಕ್ಕೇ, ಬೇಕಾದ್ದನ್ನು ಮಾಡಿಕೊಂಡು ಇರುವ ಮುಕ್ತತೆಯನ್ನು ದಯಪಾಲಿಸಿದ್ದ ನಗರದೆಡೆಗೆ ನಿಜಕ್ಕೂ